<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>

<u>Spl.C.113/2023</u>

ದಿಃ 19.09.2025
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-14 Pw-14

| | | |
|---|---|---|
| ಹೆಸರು | ಃ | ಸೌಮ್ಯ |
| ತಂದೆಯ ಹೆಸರು | ಃ | ಗಂಗಯ್ಯ |
| ವಯಸ್ಸು | ಃ | 32 ವರ್ಷ |
| ಉದ್ಯೋಗ | ಃ | ಡಬ್ಲ್ಯೂ ಪಿಸಿ ನಂಬರ್.18,<br>ಡಿವೈಎಸ್‌ಪಿ ಕಚೇರಿ, ಚನ್ನಪಟ್ಟಣ |
| ವಾಸಸ್ಥಳ | ಃ | ಚನ್ನಪಟ್ಟಣ |

<u>ಮುಖ್ಯ ವಿಚಾರಣೆಃ ಪ್ರಭಾರ ಸರ್ಕಾರಿ ಅಭಿಯೋಜಕರಿಂದಃ</u>

ನಾನು ಕಳೆದ 3 ವರ್ಷಗಳಿಂದ ಡಿವೈಎಸ್‌ಪಿ ಕಚೇರಿ, ಚನ್ನಪಟ್ಟಣದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ11.04.2023ರಂದು ಈ ಪ್ರಕರಣದ ತನಿಖಾ ಸಮಯದಲ್ಲಿ ತನಿಖಾಧಿಕಾರಿಗಳ ಆದೇಶದಂತೆ ನಾನು ಅವರ ಜೊತೆ ಹಾಜರಿದ್ದು, ತನಿಖೆಗೆ ಸಂಬಂಧಿಸಿದಂತಹ ತನಿಖಾ ಪ್ರಕ್ರಿಯೆಯನ್ನು ಮೊಬೈಲ್ ಫೋನಲ್ಲಿ ಸೆರೆಹಿಡಿದಿರುತ್ತೇನೆ. ಇದಕ್ಕೆ ಸಂಬಂಧಿಸಿದಂತೆ ನಾನು ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 65ಬಿರನ್ವಯ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರ ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.13 ಹಾಗೂ ಸಾಕ್ಷಿಯ

ಸಹಿಯನ್ನು ನಿ.ಪಿ.13(ಎ) ಎಂದು ಗುರುತಿಸಲಾಯಿತು. ಎರಡು ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ.3 ಮತ್ತು 4 ಎಂದು ಈಗಾಗಲೇ ಗುರುತಿಸಲಾಗಿದೆ.

<u>ಪಾಟೀ ಸವಾಲುಃ ಶ್ರೀ. ಎಸ್.ಎನ್.ಜಿ., ವಕೀಲರಿಂದ ಆರೋಪಿಗಳ ಪರವಾಗಿಃ</u>

ನಾನು ತನಿಖಾ ಪ್ರಕ್ರಿಯೆಯನ್ನು ಸೆರೆಹಿಡಿದ ಮೊಬೈಲ್ ಫೋನ್ ರಿಯಲ್ ಮಿ ಆಗಿರುತ್ತದೆ. ಅದರ ಮಾಡೆಲ್ ಸಂಖ್ಯೆ ನನಗೆ ಗೊತ್ತಿಲ್ಲ. ಸದರಿ ಆ್ಯಂಡ್ರಾಯ್ಡ್ ಮೊಬೈಲ್‌ನ ಮೆಮೋರಿ ಕಾರ್ಡ್ ನ ಕೆಪಾಸಿಟಿ ಎಷ್ಟು ಎಂದು ನನಗೆ ಗೊತ್ತಿಲ್ಲ. ಸದರಿ ಮೊಬೈಲ್‌ನ ಇನ್‌ಬಿಲ್ಟ್ ಕೆಪಾಸಿಟಿ ಎಷ್ಟು ಜಿ.ಬಿ. ಎಂದು ನನಗೆ ಗೊತ್ತಿಲ್ಲ. ಅದು ನನಗೆ ಸೇರಿದಂತಹ ಮೊಬೈಲ್ ಎಂದು ನಾನು ನನ್ನ ಪ್ರಮಾಣ ಪತ್ರದಲ್ಲಿ ಹೇಳಿಕೊಂಡಿರುತ್ತೇನೆ. ಸದರಿ ಮೊಬೈಲ್ ಆ್ಯಂಡ್ರಾಯ್ಡ್ 10 ಆಗಿದ್ದರೆ ಫೋಟೋ ತೆಗೆದಂತಹ ತಾರೀಖು, ಸಮಯ ಮತ್ತು ಲೊಕೇಷನ್ ಅದರಲ್ಲಿ ಬರುತ್ತದೆ ಎಂದರೆ ಸಾಕ್ಷಿ, ನನ್ನ ಮೊಬೈಲ್‌ನಲ್ಲಿ ಆ ಸೆಟ್ಟಿಂಗ್ಸ್ ಇಲ್ಲ ಎಂದು ಉತ್ತರಿಸಿರುತ್ತಾರೆ. ನಾನು ಸ್ಥಳದಲ್ಲಿ ಹಾಜರಿರಲಿಲ್ಲ ಹಾಗೂ ತನಿಖಾ ಸಮಯದಲ್ಲಿ ಯಾವುದೇ ದೃಶ್ಯಾವಳಿಗಳನ್ನು ನನ್ನ ಮೊಬೈಲ್ ನಲ್ಲಿ ಸೆರೆಹಿಡಿದಿಲ್ಲ ಎಂದರೆ ಸರಿಯಲ್ಲ. ತನಿಖಾಧಿಕಾರಿಗಳಿಗೆ ಈ ಪ್ರಕರಣದಲ್ಲಿ ಪೂರಕವಾಗುವಂತೆ ನಿ.ಪಿ.13ರ ಪ್ರಮಾಣ ಪತ್ರವನ್ನು ಸೃಷ್ಟನೆ ಮಾಡಿ

ನೀಡಿರುತ್ತೇನೆ ಎಂದರೆ ಸರಿಯಲ್ಲ. ಮೊಬೈಲ್ ಕೂಡ ನನ್ನದಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಪಂಚಾಕ್ಷರಿ.ಎಂ.)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.